ಡಾ.ಭೀಮಣ್ಣ ಘನಾಥೆ
ಸರಕಾರಿ ಮಹಿಳಾ ಪ್ರತಮ ದರ್ಜೆ ಕಾಲೇಜ
ಕಲಬುರಗಿ

# ಭಾರತದ ರಾಷ್ಟ್ರೀಯ ಕಾಂಗ್ರೇಸ್ಸಿನ ಸ್ಥಾಪನೆ ೧೮೮೫

೧. ಪೀಠಿಕೆ.
೨. ಕಾಂಗ್ರೇಸ್ಸಿನ ಸ್ಥಾಪನೆ ಪೂರ್ವದಲ್ಲಿದ್ದ ಭಾರತೀಯ ಸಂಘ-ಸ0ಸ್ಥೆಗಳು.
೩. ಕಾ0ಗ್ರೇಸ್ಸಿನ ಸ್ಥಾಪನೆಯಲ್ಲಿ ಸುರೇಂದ್ರನಾಥ ಬ್ಯಾನರ್ಜಿಯ ಪಾತ್ರ.
೪. ಕಾಂಗ್ರೇಸ್ಸಿನ ಸ್ಥಾಪನೆಯಲ್ಲಿ A.O. ಹ್ಯೂಮ್‌ರ ಪಾತ್ರ.
೫. ಭಾರತದ ರಾಷ್ಟ್ರೀಯ ಕಾಂಗ್ರೇಸ್ಸಿನ ಸ್ಥಾಪನೆ
೬. ಭಾರತದ ರಾಷ್ಟ್ರೀಯ ಕಾಂಗ್ರೇಸ್ಸಿನ ಧೇಯೋದ್ದೇಶಗಳು.
೭. ಭಾರತದ ರಾಷ್ಟ್ರೀಯ ಕಾಂಗ್ರೇಸ್ಸಿನ ರಚನಾ ವಿಧಾನ.
೮. ಭಾರತದ ರಾಷ್ಟ್ರೀಯ ಕಾಂಗ್ರೇಸ್ಸಿನ ಸಿದ್ಧಾಂತ-ಗುರಿ.
೯. ಉಪಸ0ಹಾರ

ಪೀಠಿಕೆ.;-

ಭಾರತದ ರಾಷ್ಟ್ರೀಯ ಕಾಂಗ್ರೇಸ್ಸಿನ ಸ್ಥಾಪನೆ ಅಧುನಿಕ ಭಾರತದ ಮತ್ತು ವಿಶ್ವದ ಇತಿಹಾಸದಲ್ಲಿ ಪ್ರಮುಖ ಘಟನೆಯಾಗಿದೆ. ಭಾರತೀಯ ರಾಷ್ಟ್ರೀಯತೆಯ, ಸ್ವಾಭಿಮಾನದ ಹಾಗೂ ಸ್ವಾತಂತ್ರ್ಯದ ಸಾಕಾರ ರೂಪವಾಗಿ ಉದಯಿಸಿದ ರಾಷ್ಟ್ರೀಯ ಕಾಂಗ್ರೇಸ್ ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ವಹಿಸಿದ ಪಾತ್ರ ಮಹತ್ವದಾಗಿದೆ.

ಕಾಂಗ್ರೇಸ್ಸಿನ ಸ್ಥಾಪನೆ ಪೂರ್ವದಲ್ಲಿದ್ದ ಭಾರತೀಯ ಸಂಘ-ಸ0ಸ್ಥೆಗಳು.

೧೮೩೦ ಕಲ್ಕತ್ತಾ ದ್ವಾರಕನಾಥ ಟಾಗೋರ್ ದಿ ಲ್ಯಾಂಡ್ ಹೊಲ್ಡರ್ ಸೊಸೈಟಿ
೧೮೬೬ ಲಂಡನ್ ದಾದಾಬಾಯಿ ನವರೋಜಿ ಈಸ್ಟ ಇಂಡಿಯಾ ಅಸೋಸಿಯೇಷನ್
೧೮೩೯ ಲಂಡನ್ ವಿಲಿಯಮ್ ಆಡಮ್ ಬ್ರಿಟಿಷ್ ಇಂಡಿಯಾ ಸೊಸ್ಯಟಿ
೧೮೭೦ ಪೂನಾ ರಾನಡೆ &ಸಿ.ವಿ.ಜೋಷಿ ಪೂಣಾ ಸಾರ್ವಜನಿಕ ಸಭಾ
೧೮೭೬ ಬಂಗಾಳ ಸುರೇಂದ್ರನಾಥ ಬ್ಯಾನರ್ಜಿ ಇಂಡಿಯನ್ ಅಸೋಸಿಯೇಷನ್
೧೮೮೪ ಮದ್ರಾಸ ಜಿ. ಸುಬ್ರಮಣ್ಯಂ– ಮದ್ರಾಸ ಮಹಾಜನ ಸಭಾ
೧೮೮೩ ಸುರೇಂದ್ರನಾಥ ಬ್ಯಾನರ್ಜಿ ಇಂಡಿಯನ್ ನ್ಯಾಷನಲ್ ಕಾನ್ಫರೆನ್ಸ್

ಕಾಂಗ್ರೇಸ್ಸಿನ ಸ್ಥಾಪನೆಯಲ್ಲಿ ಸುರೇಂದ್ರನಾಥ ಬ್ಯಾನರ್ಜಿಯ ಪಾತ್ರ.

ಇವರು ಬಂಗಾಳದ ಕಲ್ಕತ್ತದಲ್ಲಿ ೧೮೪೮ ನವಂಬರ ೨೮ರಂದು ಜನಿಸಿದರು. ಇವರ ತಂದೆ ದುರ್ಗಚಂದ್ರ ಬ್ಯಾನರ್ಜಿ ಕಲ್ಕತ್ತ ಪ್ರಸಿದ್ಧ ಡಾಕ್ಟರ ಆಗಿದ್ದರು. ಪೇರಂಟಲ್ ಕಾಲೇಜು ಮತ್ತು ಹಿಂದು ಕಾಲೇಜುನಲ್ಲಿ ಶಿಕ್ಷಣ ಪಡೆದರು. ಕಲ್ಕತ್ತ ವಿಶ್ವವಿದ್ಯಾಲಯದಿಂದ ಪದವಿ ಪಡೆದರು. ನಂತರದಲ್ಲಿ ಇವರು ೧೮೬೯ ರಲ್ಲಿ ನಾಗರಿಕ ಸೇವಾ ಪರೀಕ್ಷೆಯಲ್ಲಿ (I.ಂ.S) ಪಾಸಾದರು. ಅನೇಕ ವಿವಾದಗಳನ್ನು ಎದುರಿಸಿ ಕಲ್ಕತದ ಜಲಾಲಬಾದ (Sಥಿಟheಣ.) ನಲ್ಲಿ ಮ್ಯಾಜಿಸ್ಟ್ರೇಟ್ ಆಗಿ ಹುದ್ದೆ ಅಲಂಕರಿಸಿದರು. ಮತ್ತು ಬಹು ಬೇಗನೇ ಜನಾಂಗಿಯ ತಾರತಮ್ಯ ನೀತಿಯಿಂದಾಗಿ ಕೆಲಸವನ್ನು ಕಳೆದುಕೊಂಡರು. ಬ್ರಿಟಿಷರ ಈ ನೀತಿಯಿಂದ ಅನೇಕ ಭಾರತೀಯರು ಉನ್ನತ ಹುದ್ದೆಯಿಂದ ವಂಚಿತರಾಗಿದ್ದರು. ಕಾರಣ ಇವರ ವಿರುದ್ಧ ಹೋರಾಡಲು ೧೮೭೬ ರಲ್ಲಿ ಇಂಡಿಯನ್ ಅಸೋಸಿಯೇಷನ್ ಎಂಬ ರಾಷ್ಟ್ರಮಟ್ಟದ ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಿ, ಪ್ರಚಾರಕ್ಕಾಗಿ ದೇಶದಾಂತ್ಯ ಸಂಚಾರಸಿ ಬುದ್ದಿವಂತ ವಿದ್ಯಾವಂತರನ್ನು ಸಂಘಟಿಸಿದರು. ಹಾಗೂ ಬ್ರಿಟಿಷರ ವಿರುದ್ಧ ಹೋರಾಡಲು ೨೫೦೦೦ ಹಣವನ್ನು ಸಂಗ್ರಹಿಸಿದರು. ದೇಶದಲ್ಲಿರುವ ವಿವಿಧ ಸಂಘ-ಸ0ಸ್ಥಗಳನ್ನು ಒಂದೇ ಸೂರಿನಲ್ಲಿ ತರಲು ರಾಷ್ಟ್ರ ಮಟ್ಟದ ಸಮ್ಮೇಳನ (ನ್ಯಾಶನಲ್ ಕಾನ್ಫರೆನ್ಸ್ ) ೧೮೮೩ ರಲ್ಲಿ ನಡೆಸಲು ತೀರ್ಮಾನಿಸಿ ಕ್ರೀಯಾಶೀಲರಾದರು. ರಾಷ್ಟ್ರಮಟ್ಟದಲ್ಲಿ ರಾಜಕೀಯ

ಸಂಸ್ಥೆಯನ್ನು ಸ್ಥಾಪಿಸುವದರಲ್ಲಿ ಇವರೇ ಮೊದಲಿಗರು ಅದ್ದರಿಂದ ಇವರನ್ನು "ರಾಷ್ಟ್ರಗುರು " "ಭಾರತದ ರಾಷ್ಟ್ರೀಯ ಚಳುವಳಿಯ ಪಿತಾಮಹಾ " ಎಂದು ಕರೆಯುವರು. ಇದೇ ಸಮಯದಲ್ಲಿ A.O. ಹ್ಯೂಮ್‌ರ ಪ್ರವೇಶವಾಯಿತು. ೧೮೮೩ರ ಇಂಡಿಯನ್ ನ್ಯಾಶನಲ್ ಕಾನ್ಫರೆನ್ಸ್ ನ ಯಶಸ್ವಿಯ ಪ್ರೇರಣೆಯಿಂದ ಸುರೇಂದ್ರನಾಥ ಬ್ಯಾನರ್ಜಿಯವರು ಬ್ರಿಟಿಷರ ಕ್ರೂರ ದೃಷ್ಠಿ ಯಿಂದ ತಾವೂ ಸ್ಥಾಪಿಸಲು ಹೋರಟಿರುವ ಸಂಸ್ಥೆ ಬಹು ಕಾಲ ಬದಕಲು, ಭಾರತೀಯರ ಹಿತಾಸಕ್ತಿಯ ಬೆಂಬಲಿಗರಾದ & ಬ್ರಿಟಿಷ ಅಧಿಕಾರಿಗಳ ಗೌರವಾನೀತ ವ್ಯಕ್ತಿಯಾದ A.O. ಹ್ಯೂಮ್‌ರ ನಾಯಕತ್ವಕ್ಕೆ ಮನ್ನಣೆ ನೀಡಿದರು.

ಕಾಂಗ್ರೇಸ್ಸಿನ ಸ್ಥಾಪನೆಯಲ್ಲಿ A.O. ಹ್ಯೂಮ್‌ರ ಪಾತ್ರ. ;-

A.O. ಹ್ಯೂಮ್‌ರ ಪೂರ್ಣ ಹೆಸರು ಅಲನ್ ಆಕ್ವೇವಿಯನ್ ಹ್ಯೂಮ್ ಇವರು ಹ್ಯೂಮ್ ಸೇಂಟ ಮೇರಿ & ಕ್ರೆ. ಕೆಂಟ್ ಜೋಸೆಫ್ ಹ್ಯೂಮ್‌ರ ಮಗನಾಗಿ ೬ ಎಟಿe ೧೮೨೯ ರಲ್ಲಿ ಜನಿಸಿದನು. ಅವರು ವೈದ್ಯಕೀಯ ಮತ್ತು ಶಸ್ತ್ರ ಚಿಕಿತ್ಸೆಯ ಅಧ್ಯಯನವನ್ನು ಮಾಡಿದರು ನಂತರದಲ್ಲಿ I.A.S ಆಧಿಕಾಯಾಗಿ ೧೮೪೯ ರಿಂದ ೧೮೮೨ ರವರೆಗೆ ಕಲೆಕ್ಟರ್ ಆಗಿ, ಕಮೀಷನರ್ ಆಗಿ, ಭಾರತದ ಆಧಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ೧೮೮೨ ರಲ್ಲಿ ನಿವೃತ್ತಿಯಾದ ನಂತರ ಭಾರತದ ಸಂಸ್ಕೃತಿ, ಭಾರತೀಯರ ಗುಣಸ್ವಭಾವಗಳಿಗೆ ಮಾರು ಹೋಗಿ ಅವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಲು ತಮ್ಮ ಜೀವನವನ್ನು ಮುಡುಪಾಗಿಟ್ಟರು. ಭಾರತೀಯ ವಿದ್ಯಾವಂತರನ್ನು ರಾಜಕೀಯಕ್ಕೆ ಕರೆ ತರಲು ವಿಶ್ವ ವಿದ್ಯಾಲಯದ ಪದವಿ ವಿದ್ಯಾರ್ಥಿಗಳಿಗೆ ಪತ್ರ ಬರೆದು " ಭಾರತದ ಆಭಿವೃದ್ಧಿಗೆ ದುಡಿಯುವ ನಿಷ್ಠಾವಂತರಾದ , ರಾಷ್ಟ್ರೀಯ ಹೀತಾಶಕ್ತಿಯುಳ್ಳ ವಿದ್ಯಾರ್ಥಿಗಳು ಮುಂದೆಬರಬೇ೦ದು ಕರೆ ನೀಡಿದರು " ಇದೇ ಸಮಯದಲ್ಲಿ ಸುರೇಂದ್ರನಾಥ ಬ್ಯಾನರ್ಜಿಯವರು ದೇಶದಲ್ಲಿರುವ ವಿವಿಧ ಸಂಘ-ಸ೦ಸ್ಥೆಗಳನ್ನು ಒಂದೇ ಸೂರಿನಲ್ಲಿ ತರಲು ರಾಷ್ಟ್ರ ಮಟ್ಟದ ಸಮ್ಮೇಳನ (ನ್ಯಾಶನಲ್ ಕಾನ್ಫರೆನ್ಸ್ ) ೧೮೮೩ ರಲ್ಲಿ ನಡೆಸಲು ತೀರ್ಮಾನಿಸಿ ಯಶಸ್ವಿಯಾಗಿದ್ದರು. ಮತ್ತು ಬ್ರಿಟಿಷರ ಕ್ರೂರ ದೃಷ್ಠಿ ಯಿಂದ ತಾವೂ ಸ್ಥಾಪಿಸಲು ಹೋರಟಿರುವ ಸಂಸ್ಥೆ ಬಹು ಕಾಲ ಬದಕಲು, A.O. ಹ್ಯೂಮ್‌ರ ನಾಯಕತ್ವಕ್ಕೆ ಮನ್ನಣೆ ನೀಡಿದರು.

ಭಾರತದ ರಾಷ್ಟ್ರೀಯ ಕಾಂಗ್ರೇಸ್ಸಿನ ಸ್ಥಾಪನೆ

A.O. ಹ್ಯೂಮ್‌ರು W.C. ಬ್ಯಾನರ್ಜಿ, ರಾನಡೆ, ದಾದಾಬಾಯಿ ನವರೋಜಿ, ಫಿರೋಜ್ ಷಹಾ ಮೆಹ್ತಾ, ಸುಬ್ರಮಣ್ಯ ಐಯರ್, ಮುಂತಾದ ನಾಯಕರ ಜೋತೆ ಸಮಾಲೋಚಿಸಿದರು.

"ಸರಕಾರದ ಹೊರಗಿನ ಒಂದು ಪ್ರಜಾಪ್ರತಿನಿಧಿ ಸಭೆಯಂತೆ ತಾವೂ ಸ್ಥಾಪಿಸಲು ಹೋರಟಿರುವ ಕಾಂಗ್ರೇಸ್ಸ್ ಪಕ್ಷವು ಕೆಲಸ ಮಾಡುತ್ತದೆ ಎಂದು, ಹಾಗೂ ಕಾಗ್ರೇಸ್ಸ ಪಕ್ಷವು ಬ್ರಿಟಿಷ ಮಹಾರಾಣಿಯ ಸಮ್ಮುಖದ ಸವಿನಯ ವಿರೋಧ ಪಕ್ಷದಂತೆ ಕುಂದುಕೋರತೆಗಳ ಸುಧಾರಣೆಗಳಿಗೆ ಕೋರಿಕೇದಾರಂತೆ ಕೆಲಸ ಮಾಡುತ್ತದೆ ಎಂದು ಮಹಾರಾಣಿಯ ಹಾಗೂ ಆಗಿನ ವೈಸ್ ರಾಯ್ ಲಾರ್ಡ್ ಡಫರೀನ್‌ನ ಸಮ್ಮತಿ ಪಡೆದನು. ೧೮೮೫ ಡಿಸಂಬರ ೨೬, ೨೭, ೨೮ ರಂದು ಕಾಂಗ್ರೇಸ್ಸ ಪಕ್ಷದ ಸ್ಥಾಪನಾ ಸಮ್ಮೇಳನವನ್ನು ಪೂನಾ ದಲ್ಲಿ ನಡೆಸಲು ತಿರ್ಮಾನಿಸಲಾಯಿತು. ಆದರೆ ಕಾಲರ ಮತ್ತು ಪ್ಲೇಗು ರೋಗದ ಭಯದಿಂದ ಸಮ್ಮೇಳವನ್ನು ಬಾಂಬೆಯ ' ಗೋಕಲ್ ದಾಸ್ ತೇಜ್ ಪಾಲ್ ಸಂಸ್ಕೃತ ಕಾಲೇಜನಲ್ಲಿ ಬದಲಾಸಲಾಯಿತು. ಈ ಸಮ್ಮೆಳನದಲ್ಲಿ ದೇಶದ ವಿವಿಧ ಭಾಗಗಳಿಂದ, ವಿವಿಧ ಸಂಘ-ಸ೦ಸ್ಥೆಗಳಿ೦ದ ಸುಮಾರು ೭೨ ಜನ ನಾಯಕರು ಭಾಗವಹಿದ್ದರು. ಕರ್ನಾಟಕದ ಬಳ್ಳಾರಿಯಿಂದ ಮೂರು ಜನ ಸದ್ಯಸ್ಯರು ಭಾಗವಹಿಸಿದ್ದರು. ಇವರೆಲ್ಲರ ಸರ್ವಾನುಮತದಿಂದ W.C. ಬ್ಯಾನರ್ಜಿಯವರನ್ನು ಅಧ್ಯಕ್ಷರನ್ನಾಗಿ, A.O. ಹ್ಯೂಮ್‌ರ ಪ್ರಧಾನ ಕಾರ್ಯದರ್ಶಿಯಾಗಿ ಘೋಷಿಸಲಾಯಿತು, ಕಾಂಗ್ರೇಸ್ಸನ ಜನಕ A.O. ಹ್ಯೂಮ್‌ರಿಗೆ ಜಯವಾಗಲಿ ಎಂದು ಜಯಘೋಷದೊಂದಿಗೆ ೧೯೧೨ ರವರೆಗೆ ಕಾಂಗ್ರೇಸ್ಸ ಪಕ್ಷದ ಅಧಿವೇಶನ ನಡೆಯುತಿತ್ತು.

ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಾರಂಬಿಕ ಧೇಯೋದ್ದೇಶಗಳು.

೧.) ಭಾರತದಲ್ಲಿ ಬ್ರಿಟಿಷ ಪ್ರಭುತ್ವವನ್ನು ಶಾಶ್ವತಗೊಳಿಸುವುದು.

೨.) ಇಂಗ್ಲೇ೦ಡಿನ ಮಹಾರಾಣಿಯ ವಿರೋಧ ಪಕ್ಷದಂತೆ ಭಾರತದಲ್ಲಿ ಕಾಂಗ್ರೇಸ್ಸ ಪಕ್ಷ ಭಾರತದಲ್ಲಿ ಕೆಲಸ ಮಾಡುವುದು.

೩.) ಸರ್ಕಾರದ ಲೋಪದೋಷಗಳನ್ನು ಅವರ ಗಮನಕ್ಕೆ ತಂದು ಅದರ ಪರಿಹಾರಕ್ಕೆ ಸಲಹೆ ನೀಡುವೂದು.

೪.) ಭಾರತೀಯರನ್ನು ಬ್ರಿಟಿಷ ಸಾಮ್ರಾಜ್ಯದ ಹೆಮ್ಮೆಯ ಪೌರರನ್ನಾಗಿಸುವುದು.

೫.) ನೈತಿಕ & ಆರ್ಥಿಕ ಪ್ರಗತಿಯನ್ನು ಬ್ರಿಟಿಷ ಪೌರರಾಗಿ ಪಡೆಯುವುದು.

೬.) ಪಕ್ಷದ ಸದ್ಯಸ್ಯರಾಗಬಯಸುವವರು ೨೫ ಪೈಸೆ ಶುಲ್ಕ ನೀಡಬೇಕು.

ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ರಚನಾ ವಿಧಾನ. ;-
ಬಾಷೆಯ ಆದಾರದ ಮೇಲೆ ೨೦ ಪ್ರಾಂತಗಳಾಗಿ ವಿಭಾಗದಲ್ಲಿ -ಪ್ರತಿ ಜಿಲ್ಲೆಯಲ್ಲಿ- ಪ್ರತಿ ತಾಲೂಕುಗಳಲ್ಲಿ ಪಕ್ಷ ಸಂಘಟಿಸುವುದು. ಪ್ರತಿ ಘಟಕದಲ್ಲಿಯೂ ಅಧ್ಯಕ್ಷ ಕಾರ್ಯದರ್ಶಿ ಮತ್ತು ಖಜಾಂಚಿಯನ್ನು ನೆಮಿಸುವುದು. ೧೪ ಜನ ಕರ್ಾಯಕಾರಿ ಮಂಡಳಿಯ ರಚನೆ. ಪ್ರತಿ ಡಿಸಂಬರ ತಿಂಗಳದಲ್ಲಿ ರಾಷ್ಟ್ರೀಯ ಸಮ್ಮೇಳನ ನಡೆಸುವುದು. ಹಾಗೇನೆ ಪ್ರಾಂತೀಯ ಸಮ್ಮೇಳನ ನಡೆಸುವುದು ಹೀಗೆ ಪಿರಾಮಿಡ್ಡಾಕೃತಿಯಲ್ಲಿ ಪಕ್ಷ ರಚಿಸಲಾಯಿತು.

ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ರಕ್ಷಾ-ಕವಚಸಿದ್ಧಾಂತ-ಗುರಿ.
ಬ್ರಿಟಿಷರ ಅನ್ಯಾಯಗಳ ವಿರುದ್ಧ ಭಾರತೀಯರು ತುಂಬಿಕೊ0ಡಿದ್ದ ಪ್ರತಿಭಟನಾ ಶಕ್ತಿಯನ್ನು ನಿಧಾನವಾಗಿ ಬಿಡುಗಡೆ ಮಾಡಿ ಅವರ ಆಶೋತ್ತರಗಳನ್ನು ಬ್ರಿಟಿಷ್ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಒಂದೊ0ದಾಗಿ ಈಡೇರಿಸುವದೇ ಈ ರಕ್ಷಾ-ಕವಚ ಸಿದ್ಧಾಂತವಾಗಿದೆ.
೧೮೫೭ ರ ಕ್ರಾಂತಿಯ ಸಮಯದಲ್ಲಿ ಒಮ್ಮೆಗೆ ಸ್ಪೋಟಗೊಂಡ ಭಾರತೀಯರ ಅಸಮಾಧಾನದ ಭೀಕರತೆ ಮತ್ತೊಮ್ಮೆ ಮರುಕಳಿಸದಿರಲೆಂದೆ ಉದ್ದೇಶ ಇಟ್ಟುಕೊಂಡು ಹ್ಯೂಮರು ವಿದ್ಯಾವಂತ ಭಾರತೀಯ ನಾಯಕರ ಜೋತೆ ಸಮಾಲೋಚಿಸಿ ಇಂಗ್ಲೇ0ಡಿನ ಮಹಾರಾಣಿಯ ವಿರೋಧ ಪಕ್ಷದಂತೆ ಭಾರತದಲ್ಲಿ ಕಾಂಗ್ರೇಸ್ಸ ಪಕ್ಷ ಕೆಲಸ ಮಾಡುವುದು. ಎಂಬ ರಕ್ಷಾ-ಕವಚ ಸಿದ್ದಾಂತದ ಅಡಿಯಲ್ಲಿ ಕಾಂಗ್ರೆಸ್ಸಿನ ಉದಯದ ರಹಸ್ಯವನ್ನು ಮರೆಮಾಚಲಾಗಿದೆ.